## ಅನುಬಂಧ 1 – ಕಿರುನಾಟಕ ಸ್ಕ್ರಿಪ್ಟ್

ಕಿರುನಾಟಕವನ್ನು ಸ್ಕ್ರಿಪ್ಟ್‌ನ ಅರ್ಥ ಬದಲಾಗದಂತೆ ಸ್ಥಳೀಯ ಭಾಷೆಯಲ್ಲೂ ಮಾಡಬಹುದು. ಇದರಿಂದ ಅಭ್ಯಾಸ ನಡೆಸುವಾಗ ಸಮಯ ಉಳಿತಾಯವಾಗುತ್ತದೆ.

ಪಾತ್ರ ಪಟ್ಟಿ:

- ಅಮ್ಮ
- ಅಪ್ಪ
- ಮಗ
- ಮಗಳು
- ಅಜ್ಜ
- ಅಜ್ಜಿ

**ಅಮ್ಮ:** ನನಗೆ ತಡವಾಗುತ್ತಿದೆ ಹಾಗಾಗಿ ಇವತ್ತು ನಾನು ಉಪ್ಪಿಟ್ಟು ಮಾಡುತ್ತೇನೆ.

(ಅವಳು ತನ್ನ ಕೆಲಸವನ್ನು ಪ್ರಾರಂಭಿಸುತ್ತಾಳೆ)

**ಅಜ್ಜಿ:** ಮಾಲಾ, ನನಗೆ ಬಾಯಾರಿಕೆಯಾಗುತ್ತಿದೆ. ಸ್ವಲ್ಪ ನೀರು ಕೊಡುವೆಯಾ?

**ಮಾಲಾ(ಅಮ್ಮ):** ಹಾ ತರುತ್ತೇನೆ!

(ಅಮ್ಮ, ಅಜ್ಜಿಗೆ ನೀರು ತಂದುಕೊಡುತ್ತಾಳೆ)

**ಅಜ್ಜ:** ಮಾಲಾ ನನಗೆ ಸ್ವಲ್ಪ ಕಾಫಿ ಮಾಡುತ್ತೀಯಾ.

**ಮಾಲಾ:** ಹಾ! ಮಾವ.

ಮಾಲಾ ಅಡುಗೆಮನೆಗೆ ಹೋಗುತ್ತಾಳೆ.

**ಮಾಲಾ:** ತರಕಾರಿಗಳು ಮತ್ತು ಬೇಳೆ ಗ್ಯಾಸ್ ಸ್ಟವ್ ಮೇಲೆ ಬೇಯುತ್ತಿದೆ. ಅದನ್ನು ತೆಗೆದು ನಾನು ಕಾಫಿ ಮಾಡಿದರೆ ನನ್ನ ಕೆಲಸಗಳಿಗೆ ತಡವಾಗುತ್ತದೆ.

**ಅಜ್ಜಿ:** ಮಾಲಾ! ಕಾಫಿ ತಯಾರಾಯಿತೇ?

**ಮಾಲಾ:** ಸ್ವಲ್ಪ ಇರಿ.

**ಮಗ:** ಅಮ್ಮಾ, ನನಗೆ ಇಂದು ಬೆಳಗ್ಗೆ ತಿಂಡಿಗೆ ಪೂರಿ ಮಾಡುತ್ತೀಯ?

**ಅಮ್ಮ:** ಇಲ್ಲ, ಮಗಾ! ನಾನು ವಾರಾಂತ್ಯದಲ್ಲಿ ನಿನಗೆ ಪೂರಿ ಮಾಡಿಕೊಡುತ್ತೇನೆ. ಬೆಳಗಿನ ಹೊತ್ತು ಮತ್ತೊಂದು ತಿಂಡಿ ಮಾಡುವಷ್ಟು ಸಮಯ ಇಲ್ಲ ನನಗೆ.

**ಮಗ:** ಓಹ್ ಇಲ್ಲ! ನೀನು ಯಾವಾಗಲು ಬ್ಯುಸಿಯಾಗಿರುತ್ತೀಯಾ.

**ಮಗಳು:** ಅಮ್ಮಾ! ನನ್ನ ಶೂ ಪಾಲಿಶ್ ಅನ್ನು ಎಲ್ಲಿ ಇಟ್ಟಿದ್ದೀಯಾ?

**ಅಮ್ಮ:** ಅದು ಶೂ ರ್‍ಯಾಕ್‌ನಲ್ಲಿಯೇ ಇದೆ.

**ಮಗಳು:** ಆದರೆ ನನಗದು ಕಾಣಿಸುತ್ತಿಲ್ಲ!

**ಅಮ್ಮ:** (ಶೂ ರ್‍ಯಾಕ್ ಬಳಿ ಹೋಗಿ ಅದನ್ನು ಹುಡುಕಿ ಕೊಡುತ್ತಾಳೆ) ಇಲ್ಲಿದೆ ನೋಡು. ಅಲ್ಲೇ ಹಿಂದೆ ಇರುವ ಶೂ ಅಡಿಯಲ್ಲಿ ಬಿದ್ದಿತ್ತು. ಇನ್ನೊಂದು ಸ್ವಲ್ಪ ಹುಡುಕಿದ್ದರೆ ನಿನಗದು ದೊರೆಯುತ್ತಿತ್ತು.

**ತಂದೆ:** ಓಹ್! ಮಾಲಾ! ಬೆಳಗ್ಗೆ ಬೇಗ ಎದ್ದರೆ ನಿನ್ನ ಕೆಲಸವನ್ನು ಬೇಗನೆ ಮುಗಿಸಬಹುದು!

**ಅಮ್ಮ:** ನಾನು ಈಗಾಗಲೇ ಬೆಳಗ್ಗೆ 5:30 ಕ್ಕೆ ಏಳುತ್ತಿದ್ದೇನೆ. ನೀವೆಲ್ಲರೂ ಬೆಳಗ್ಗೆ 6:30ಕ್ಕೆ ಏಳುತ್ತೀರಾ. ನಾನು ಒಂದು ಗಂಟೆ ಮೊದಲೇ ಏಳುತ್ತೇನೆ.

**ತಂದೆ:** ಹಾಗಾದರೆ, ನಿಮ್ಮ ಕೆಲಸ ಮುಗಿಸಲು ನೀವು ಬೆಳಗ್ಗೆ 5:00 ಗಂಟೆಗೆ ಏಳಬೇಕು ಎಂದು ನನಗನಿಸುತ್ತಿದೆ.

ಎಲ್ಲರೂ (ಮಗಳು ಹೊರತುಪಡಿಸಿ): ಹೌದು! ನೀನು ಬೇಗನೆ ಏಳಬೇಕು!

(ಅಮ್ಮನ ಮುಖದಲ್ಲಿ ಬೇಜಾರು ಕಾಣುತ್ತದೆ)

**ಮಗಳು:** ಅವಳು ಮಾತ್ರ ಯಾಕೆ ಬೇಗ ಏಳಬೇಕು? ನಾವೆಲ್ಲರೂ ನಮ್ಮ ಮಾಮೂಲಿ ಸಮಯಕ್ಕಿಂತ 10 ನಿಮಿಷ ಬೇಗನೆ ಎದ್ದು ಅಮ್ಮನಿಗೆ ಸಹಾಯ ಮಾಡಿದರೆ! ಅವಳಿಗೆ ಸಾಕಷ್ಟು ಸಮಯ ಉಳಿತಾಯವಾಗುತ್ತದೆ ಎಂದು ನನಗನಿಸುತ್ತದೆ. ಅವಳು ಕಷ್ಟಪಡಬೇಕಾಗಿ ಬರುವುದಿಲ್ಲ. ಮನೆಗೆಲಸವನ್ನು ಮಾಡುವುದು ಕೇವಲ ಅವಳು ಮಾತ್ರ ಮಾಡುವ ಕೆಲಸವಲ್ಲ! ಕುಟುಂಬದ ಸದಸ್ಯರೆಲ್ಲರೂ ಕೆಲಸವನ್ನು ಹಂಚಿಕೊಳ್ಳಬೇಕು. ಆಕ್ಟಿಝೇನ್ ಕ್ಲಬ್‌ನಲ್ಲಿ ನನ್ನ ಶಿಕ್ಷಕರು ನನಗೆ ಇದನ್ನು ಹೇಳಿಕೊಟ್ಟಿದ್ದಾರೆ.

**ಅಜ್ಜಿ:** ಹೌದು, ನೀನು ಸರಿಯಾಗಿ ಹೇಳಿದ್ದೀಯಾ! ನಾಳೆಯಿಂದ ನಾವೆಲ್ಲರೂ ಪ್ರಯತ್ನಿಸೋಣ.

ಮರುದಿನ -(ಪ್ರತಿಯೊಬ್ಬರೂ ಮಾಮೂಲಿಗಿಂತ 10 ನಿಮಿಷ ಬೇಗನೆ ಏಳುತ್ತಾರೆ)

**ಅಜ್ಜಿ:** ಮಾಲಾ, ನಾನು ನಿನಗೆ ತರಕಾರಿ ಕತ್ತರಿಸಿ ಕೊಡುತ್ತೇನೆ.

**ತಂದೆ:** ನಾನು ಗಿಡಗಳಿಗೆ ನೀರು ಹಾಕುತ್ತೇನೆ.

ಮಕ್ಕಳು: ನಾವು ಅಜ್ಜ ಅಜ್ಜಿಗೆ ನೀರು ಇತ್ಯಾದಿಗಳನ್ನು ತಂದುಕೊಡುತ್ತೇವೆ ಮತ್ತು ನಮ್ಮ ಬ್ಯಾಗುಗಳನ್ನು ನಾವೇ ಸಿದ್ಧಪಡಿಸಿಕೊಂಡು ಶಾಲೆಗೆ ಹೊರಡಲು ತಯಾರಾಗುತ್ತೇವೆ.

**ಅಜ್ಜ:** ನಾನು ಮಕ್ಕಳನ್ನು ಸ್ಕೂಲ್ ಬಸ್ ಹತ್ತಲು ಬಸ್ ಸ್ಟಾಪ್ ತನಕ ಬಿಟ್ಟು ಬರುತ್ತೇನೆ.

ಎಲ್ಲರೂ ಸಹಾಯ ಮಾಡಲು ಪ್ರಾರಂಭಿಸುತ್ತಾರೆ,

ಎಲ್ಲ ಕೆಲಸಗಳೂ ಸುಸೂತ್ರವಾಗಿ ನಡೆಯುತ್ತವೆ.

**ಅಮ್ಮ:** ಕೇವಲ 9:00 ಗಂಟೆ ಆಯಿತಷ್ಟೆ, ಎಲ್ಲಾ ಕೆಲಸಗಳು ಮುಗಿದಿವೆ! ಇವತ್ತು, ನನಗೆ ಹೆಚ್ಚುವರಿ ಸಮಯ ಉಳಿದಿದೆ! ನಾವು ಇನ್ನೂ ಒಂದು ಕಾಫಿ ಮಾಡಿ ಎಲ್ಲರೂ ಒಟ್ಟಿಗೆ ಕುಡಿಯೋಣ.

DESH APNAYEN
DESH APNAYEN SAHAYOG FOUNDATION